ಶ್ರೀ ಅನಂತನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು) :

ಅ) ಹೌದು

ಆ) ಆರ್ಥಿಕ ಮತ್ತು ಕರ ಸ್ಥಾಯಿ ಸಮಿತಿಯು ಸ್ಥಳ ಪರಿಶೀಲನೆ ಮಾಡಿದ ನಂತರವೇ ಅನಧಿಕೃತ ಕಟ್ಟಡಗಳನ್ನು ಕೆಡವಬೇಕೆಂಬ ಬಗ್ಗೆ ಕಾನೂನಿನಲ್ಲಿ ಅವಕಾಶವಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿ ಹಳೆ ನೀರಿನ ಪೈಪ್‌ಗಳ ಬದಲಾವಣೆ

1736 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬೆಂಗಳೂರು ನಗರದ ಹಲವಾರು ಭಾಗಗಳಲ್ಲಿ ಜಲಮಂಡಳಿಯು ಹಳೆ ನೀರಿನ ಕೊಳವೆಗಳನ್ನು ಬದಲಾಯಿಸಲು ಕ್ರಮ ಕೈ ಗೊಂಡಿದೆಯೇ?*
2. *ಹಾಗಿದ್ದಲ್ಲಿ ಯಾವ ಯಾವ ಭಾಗಗಳಲ್ಲಿ ಹೊಸ ಪೈಪುಗಳನ್ನು ಅಳವಡಿಸಲಾಗುವುದು?*
3. *ಇದಕ್ಕಾಗಿ ಜಲಮಂಡಳಿಗೆ ಸರ್ಕಾರವು ನೀಡಿದ ಅನುದಾನವೆಷ್ಟು?*
4. *ನಗರದ ಎಲ್ಲಾ ಹಳೇ ಪೈಪುಗಳನ್ನು ಬದಲಾಯಿಸಲು ತಗಲುವ ವೆಚ್ಚವೆಷ್ಟು?*

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು.) :

1. ಹೌದು, ಹಳೆಯ ನೀರಿನ ಕೊಳವೆಗಳನ್ನು ಬದಲಾಯಿಸಲು ಬೆಂಗಳೂರು ಜಲ ಮಂಡಳಿಯ ಕ್ರಮವನ್ನು ತೆಗೆದುಕೊಂಡಿರುತ್ತದೆ. ಹಾಗೂ ರೂ.6.50 ಕೋಟಿ ಅಂದಾಜನ್ನು ತಯಾರಿಸಿರುತ್ತದೆ. ಈ ಅಂದಾಜು ಪಟ್ಟಿಯನ್ನು ಅನುಮೋದನೆ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

2. ಬೆಂಗಳೂರಿನ ಹಳೇ ಪ್ರದೇಶಗಳಲ್ಲಿ ಹಳೆಯದಾದ ನೀರಿನ ಕೊಳವೆಗಳನ್ನು ಬದಲಾಯಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

3. ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲು ಯೋಜಿಸಿದ.

1997-98	25 ಕಿ.ಮೀ.	2 ಕೋಟಿ.ರೂ.ಗಳು
1998-99	25 ಕಿ.ಮೀ.	2 ಕೋಟಿ.ರೂ.ಗಳು
1999-2000	30 ಕಿ.ಮೀ.	2 ಕೋಟಿ.ರೂ. ಗಳು.

4. ರೂ. 6.5 ಕೋಟಿ